ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 05/3/2020

## ಸಂವಿಧಾನದ ಆಶಯ ಮಾತು

### ರಾಜೀವ್ ಭಾಷಣಕ್ಕೆ ಮೆಚ್ಚುಗೆ 5/3/20

ಸಂವಿಧಾನ ರಚನೆ ಇತಿಹಾಸದ ಬಗ್ಗೆ ಬಿಜೆಪಿ ಶಾಸಕ ಪಿ.ರಾಜೀವ್ ಭಾಷಣ ಮೆಚ್ಚಿ 'ಗುಡ್ ರಾಜೀವ್, ಪಿ.ಎಚ್‌ಡಿಗೆ ಬೇಕಾದಷ್ಟು ಅಧ್ಯಯನ ಮಾಡಿದ್ದೀರಿ. ನಿಮ್ಮ ಮಾಹಿತಿ ಸದನಕ್ಕೆ ಮೆಚ್ಚುಗೆಯಾಗಿದೆ' ಎಂದು ಸ್ಪೀಕರ್ ಕಾಗೇರಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.



ಸಂವಿಧಾನದ ಚರ್ಚೆಗೆ ಚಾಲನೆ ನೀಡಿದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಬಳಿಕ ಬಿಜೆಪಿ ಶಾಸಕರಿಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿರಲಿಲ್ಲ. ಆದರೆ ತಮಗೆ ದೊರೆತ ಸಂಕ್ಷಿಪ್ತ ಅವಧಿಯಲ್ಲೇ ಸಂವಿಧಾನ ರಚನೆ ಹಿನ್ನೆಲೆಯಲ್ಲಿರುವ ಬೆಟ್ಟದಷ್ಟು ಪರಿಶ್ರಮ ಹಾಗೂ ಇತಿಹಾಸವನ್ನು ರಾಜೀವ್ ಸದನದ ಮುಂದಿಟ್ಟರು. "ಇಂದು ನಮ್ಮ ಸದನದಲ್ಲಿ ನಡೆಯುತ್ತಿರುವ ಚರ್ಚೆ ದೇಶದ ಇತಿಹಾಸದಲ್ಲೇ ಹೊಸ ಪ್ರಯೋಗ. ನ್ಯಾಯವಾದಿಗಳಿಗೆ ಹಾಗೂ ಕಾನೂನು ಸಚಿವರಿಗೆ ಮಾತ್ರ ಸಂವಿಧಾನ ಸೀಮಿತವಲ್ಲ. ದೇಶದ ಪ್ರತಿಯೊಬ್ಬ ಪ್ರಜೆಯೂ ಈ ಬಗ್ಗೆ ಜಾಗೃತಿ ಹೊಂದಿರಬೇಕು. ಈ ಹಿನ್ನೆಲೆಯಲ್ಲಿ ನನ್ನ ಕ್ಷೇತ್ರ ವ್ಯಾಪ್ತಿಯಲ್ಲಿ ಸಂವಿಧಾನದ ಪೂರ್ವ ಪೀಠಿಕೆಯ 40 ಸಾವಿರ ಪ್ರತಿ ಮುದ್ರಿಸಿ ಎಲ್ಲ ಶಾಲೆಗಳಿಗೂ ನೀಡಿದೆ. ರಾಷ್ಟ್ರಗೀತೆಯ ಬಳಿಕ ಎಲ್ಲ ಶಾಲೆಗಳಲ್ಲಿ ಇದನ್ನು ಓದಲಾಗುತ್ತಿತ್ತು. ಈಗ ಮಕ್ಕಳಿಗೆ ಸಂವಿಧಾನದ ಪೂರ್ವಪೀಠಿಕೆ ಕಂಠಪಾಠವಾಗಿದೆ," ಎಂದು ಸದನಕ್ಕೆ ವಿವರಿಸಿದರು.

### ಊಟದ ಬಿಡುವು ಬೇಡ ಚರ್ಚೆ ಮಾಡಿ

ಸಂವಿಧಾನದ ಬಗ್ಗೆ ಸದಸ್ಯರು ಮಾಡುತ್ತಿದ್ದ ಭಾಷಣದಲ್ಲಿ ತನ್ಮಯರಾಗಿದ್ದ ಸಿಎಂ ಯಡಿಯೂರಪ್ಪ 'ಊಟಕ್ಕೆ ಬಿಡುವು ಬೇಡ, ಚರ್ಚೆ ಮುಂದುವರಿಸೋಣ' ಎಂದಿದ್ದು, ಕಾಂಗ್ರೆಸ್ ನಾಯಕರ ಶ್ಲಾಘನೆಗೆ ಪಾತ್ರವಾಯಿತು. "ಪ್ರತಿಯೊಬ್ಬರು ಸಂವಿಧಾನದ ಬಗ್ಗೆ ಹೊಂದಿರುವ ಜ್ಞಾನವನ್ನು ನಾವೆಲ್ಲ ಕೇಳಬೇಕು. ಹೀಗಾಗಿ 20 ನಿಮಿಷದ ಕಾಲವಷ್ಟೇ ಭೋಜನಕ್ಕೆ ವಿರಾಮ ನೀಡೋಣ," ಎಂದು ರಮೇಶ್ ಕುಮಾರ್ ಸಲಹೆ ನೀಡಿದರು.

### ಪ್ರತಿ ಸಲವೂ ಒಂದೊಂದು ಚರ್ಚೆ

ಇನ್ನು ಮುಂದೆ ಪ್ರತಿ ವಿಧಾನಸಭಾ ಕಲಾಪದಲ್ಲೂ ಸಾರ್ವಜನಿಕ ಆಸಕ್ತಿ ಹಾಗೂ ಸಮಸ್ಯೆಗೆ ಸಂಬಂಧಪಟ್ಟಂತೆ ಒಂದು ದಿನದ ವಿಶೇಷ ಚರ್ಚೆ ನಡೆಸಲಾಗುವುದು ಎಂದು ಸ್ಪೀಕರ್ ಕಾಗೇರಿ ಪ್ರಕಟಿಸಿದ್ದಾರೆ.

### ಶೇ.63ರಷ್ಟು ಜನರಿಂದ ಕೆಲಸಕ್ಕೆ ಲಂಚ

"ರಾಜ್ಯದಲ್ಲಿ ನೂರಕ್ಕೆ 63ರಷ್ಟು ಜನರು ಇನ್ನೂ ಲಂಚಕೊಟ್ಟು ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ. ಸಂವಿಧಾನಿಕ ಸಂಸ್ಥೆಗಳ ದುರುಪಯೋಗ ನಿರಂತರವಾಗಿ ನಡೆಯುತ್ತಿದೆ," ಎಂದು ಕಾಂಗ್ರೆಸ್ ಮುಖಂಡ ಎಚ್.ಕೆ.ಪಾಟೀಲ್ ಆರೋಪಿಸಿದ್ದಾರೆ.



"ಚುನಾವಣಾ ವ್ಯವಸ್ಥೆಯೇ ಭ್ರಷ್ಟಾಚಾರದ ಮೂಲ ಎಂಬ ಅಭಿಪ್ರಾಯ ಹೆಚ್ಚುತ್ತಿದೆ. ರಾಜ್ಯದಲ್ಲಿ ಶೇ.63ರಷ್ಟು ಜನರು ಲಂಚ ಕೊಟ್ಟು ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ. ಜಾತಿ ಆಧಾರಿತ ಚುನಾವಣಾ ವ್ಯವಸ್ಥೆ ಬಲಗೊಳ್ಳುತ್ತಿದೆ. ಹೀಗಾಗಿ ಪ್ರಾತಿನಿಧ್ಯದ ಮತದಾನ ವ್ಯವಸ್ಥೆ ಜಾರಿಗೆ ತನ್ನಿ," ಎಂದು ಸಲಹೆ ನೀಡಿದರು.

### ರಾತ್ರಿ 9.30ರವರೆಗೂ ನಡೆದ ಕಲಾಪ

'ನಮ್ಮ ಸಂವಿಧಾನ -ನಮ್ಮ ಹೆಮ್ಮೆ' ವಿಶೇಷ ಚರ್ಚೆಗೆ ಸದಸ್ಯರ ಉತ್ಸಾಹ ಮತ್ತು ಆಸಕ್ತಿಯ ಕಾರಣ ವಿಧಾನಸಭೆ ಕಲಾಪ ರಾತ್ರಿ 9.30ರವರೆಗೆ ನಡೆಯಿತು. ಬಹುತೇಕ ಸದಸ್ಯರು ಕೊನೇ ವರೆಗೂ ಕಲಾಪದಲ್ಲಿ ಹಾಜರಿದ್ದುದು ವಿಶೇಷ. ಸಂವಿಧಾನದ ಆಶಯ ಕುರಿತ ಈ ವಿಶೇಷ ಚರ್ಚೆಯನ್ನು ಶುಕ್ರವಾರ (ಮಾ.6) ರಂದೂ ಮುಂದುವರಿಸಲು ಸದನ ನಿರ್ಧರಿಸಿದೆ.